2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
ಬೆಂಗಳೂರು ದಕ್ಷಿಣ ಜಿಲ್ಲೆ, ಕನಕಪುರದಲ್ಲಿ,

**ಎಸ್.ಸಿ.5033/2024**

| | | |
|---|---|---|
| ಫಿರ್ಯಾದಿ | | ಕರ್ನಾಟಕ ಅರಣ್ಯ ಇಲಾಖೆ, ಕನಕಪುರ |
| **ವಿರುದ್ಧ** | | |
| ಆರೋಪಿ | 1 | ಚಿಕ್ಕತಿಮ್ಮ<br>ಬಿನ್ ವೆಂಕಟೇಶ್,<br>ವಯಸ್ಸು 23 ವರ್ಷ,<br>ಗೊಲ್ಲರದೊಡ್ಡಿ ಗ್ರಾಮ,<br>ಮರಳವಾಡಿ ಹೋಬಳಿ,<br>ಹಾರೋಹಳ್ಳಿ ತಾಲ್ಲೂಕು,<br>ಬೆಂಗಳೂರು ದಕ್ಷಿಣ ಜಿಲ್ಲೆ. |
| | 2 | ರಾಮಕೃಷ್ಣ<br>ಬಿನ್ ವೆಂಕಟೇಶ್,<br>ವಯಸ್ಸು 18 ವರ್ಷ,<br>ಗೊಲ್ಲರದೊಡ್ಡಿ ಗ್ರಾಮ,<br>ಮರಳವಾಡಿ ಹೋಬಳಿ,<br>ಹಾರೋಹಳ್ಳಿ ತಾಲ್ಲೂಕು,<br>ಬೆಂಗಳೂರು ದಕ್ಷಿಣ ಜಿಲ್ಲೆ. |

**ದಂಡಪ್ರಕ್ರಿಯಾ ಸಂಹಿತೆ ಕಲಂ 313 ರಡಿ ಆರೋಪಿ ಹೇಳಿಕೆ**

ಪ್ರಶ್ನೆ:1 ಸಾಕ್ಷಿಗಳ ಹೇಳಿಕೆಗಳನ್ನು ಕೇಳಿದ್ದೀರಾ?

ಉ:

ಪ್ರಶ್ನೆ:2 ಪ್ರಾಸಾ-1 ಅರುಣ್ ಬಿ.ಎಲ್. ತಮ್ಮ ಸಾಕ್ಷಿಯಲ್ಲಿ ದಿ:13.10.2018ರಂದು ಬೆಳಗ್ಗೆ 10-30 ಗಂಟೆ ಸಮಯದಲ್ಲಿ ಚಾಸಾ-2ರವರೊಂದಿಗೆ ಮರಳವಾಡಿ ಸರ್ಕಾರಿ ಬಸ್ ನಿಲ್ದಾಣದ ಬಳಿ ಗಸ್ತು ತಿರುಗುತ್ತಿರುವಾಗ, ಇಬ್ಬರು ಅನುಮಾನಸ್ಪದ ಆಸಾಮಿಗಳು ಸದರಿ ಸರ್ಕಾರಿ ಬಸ್ ನಿಲ್ದಾಣದಲ್ಲಿ ಸ್ಕೂಲ್ ಬ್ಯಾಗ್ ಹಿಡಿದುಕೊಂಡು ನಿಂತಿದ್ದರು ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉ:

ಪ್ರಶ್ನೆ:3 ಪ್ರಾಸಾ-1ರವರು ಮುಂದುವರೆದು, ನಂತರ ಇಬ್ಬರು ಆಸಾಮಿಗಳ ಚಲನವಲನಗಳನ್ನು ಗಮನಿಸಿ ಅನುಮಾನ ಬಂದು ವಿಚಾರಣೆಗೊಪಡಿಸಿ ನೋಡಿದರೂ ಅವರಿಂದ ಯಾವುದೇ ಸಮಂಜಸ ಉತ್ತರ ಬರದಿದ್ದರಿಂದ ಅವರ ಬಳಿ ಇದ್ದ ಸ್ಕೂಲ್ ಬ್ಯಾಗನ್ನು ತಪಾಸಣೆಗೊಳಪಡಿಸಿ ನೋಡಿದ್ದು, ಆಗ ಸದರಿ ಸ್ಕೂಲ್ ಬ್ಯಾಗ್‌ನಲ್ಲಿ ಗಂಧದ ವಾಸನೆ ಭರಿತ ಮರದ ತುಂಡುಗಳು ಇದ್ದವು ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆನಿ ನೀವೇನು ಹೇಳುತ್ತೀರಿ?

ಉ:

ಪ್ರಶ್ನೆ:4 ಪ್ರಾಸಾ-1ರವರು ಮುಂದುವರೆದು, ನಂತರ ಇಬ್ಬರು ಆಸಾಮಿಗಳ ಬಳಿ ಗಂಧದ ಮರದ ತುಂಡುಗಳನ್ನು ಎಲ್ಲಿಂದ ಮತ್ತು ಏಕೆ ತಂದಿದ್ದೀರಿ ಎಂದು ಪ್ರಶ್ನಿಸಿದಾಗ, ಆಸಾಮಿಗಳು ಅವರ ಊರಿನ ಬಳಿ ಇರುವ ಗುಡ್ಡದಲ್ಲಿದ್ದ ಗಂಧದ ಮರಗಳನ್ನು ಕಡಿದು ತುಂಡುಗಳನ್ನಾಗಿ ಪರಿವರ್ತಿಸಿ ಮಾರಾಟ ಮಾಡಲು ತೆಗದುಕೊಂಡು ಬಂದಿರುವುದಾಗಿ ಹಾಗೂ ಈ ಬಗ್ಗೆ ಯಾವುದೇ ಲೈಸೆನ್ಸನ್ನು ಪಡೆದಿರುವುದಿಲ್ಲ ಎಂದು ತಿಳಿಸಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉಃ

ಪ್ರಶ್ನೆ:5 ಪ್ರಾಸಾ-1ರವರು ಮುಂದುವರೆದು, ತಾನು ಹಾಗೂ ಚಾಸಾ-2ರವರು ಸದರಿ ಶ್ರೀಗಂಧದ ತುಂಡುಗಳನ್ನು ವಶಕ್ಕೆ ಪಡೆದುಕೊಂಡು ತೂಕ ಮಾಡಿ ನೋಡಿದಾಗ, ಮೂರುವರೆ ಕೆಜಿ ಇರುವುದು ಕಂಡುಬಂದಿರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉಃ

ಪ್ರಶ್ನೆ:6 ಪ್ರಾಸಾ-1ರವರು ಮುಂದುವರೆದು, ಇಬ್ಬರು ಆಸಾಮಿಗಳನ್ನು ವಶಕ್ಕೆ ಪಡೆದು ವಿಚಾರ ಮಾಡಿದಾಗ, ಅವರ ಹೆಸರು ಚಿಕ್ಕತಿಮ್ಮ ಮತ್ತು ರಾಮಕೃಷ್ಣ ಅಂತ ತಿಳಿಬಂದಿರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉಃ

ಪ್ರಶ್ನೆ:7 ಪ್ರಾಸಾ-1ರವರು ಮುಂದುವರೆದು, ಸ್ಥಳದಲ್ಲಿದ್ದ ಸ್ಥಳೀಯರು ಪಂಚನಾಮೆ ಸಹಕರಿಸದ ಕಾರಣ ಸಿಬ್ಬಂದಿಗಳಾದ ಚಾಸಾ-3 ಮತ್ತು 4ರವರನ್ನು ದೂರವಾಣಿ ಮೂಲಕ ಸ್ಥಳಕ್ಕೆ ಬರಮಾಡಿಕೊಂಡು ಅವರಿಗೆ ಈ ಪ್ರಕರಣದ ಬಗ್ಗೆ ಮಾಹಿತಿ ನೀಡಿ, ನಂತರ ಮಧ್ಯಾಹ್ನ 1-30 ರಿಂದ 2-00 ಗಂಟೆಯವರೆಗೆ ನಿಪಿ-1ರಂತೆ ಪಂಚನಾಮೆ ಜರುಗಿಸಿ ಶ್ರೀಗಂಧದ ತುಂಡುಗಳು ಹಾಗೂ ಆಸಾಮಿಗಳನ್ನು ವಶಕ್ಕೆ ಪಡೆದುಕೊಂಡಿರುವುದಾಗಿ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉಃ

ಪ್ರಶ್ನೆ:8 ಪ್ರಾಸಾ-1ರವರು ಮುಂದುವರೆದು, ನಿಪಿ-1 ಪಂಚನಾಮೆಯನ್ನು ಚಾಸಾ-2ರವರ ಸಹಾಯದಿಂದ ಬರೆಯಿಸಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉಃ

ಪ್ರಶ್ನೆ:9 ಪ್ರಾಸಾ-1ರವರು ಮುಂದುವರೆದು, ವಶಕ್ಕೆ ಪಡೆದ ಆಸಾಮಿಗಳನ್ನು ವಲಯ ಅರಣ್ಯಾಧಿಕಾರಿಗಳ ಕಛೇರಿಗೆ ಕರೆದುಕೊಂಡು ಹೋಗಿ ನಿಪಿ-2ರಂತೆ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉಃ

ಪ್ರಶ್ನೆ:10 ಪ್ರಾಸಾ-1ರವರು ಮುಂದುವರೆದು, ನಂತರ ಶ್ರೀಗಂಧದ ತುಂಡುಗಳು ಹಾಗೂ ಸ್ಕೂಲ್ ಬ್ಯಾಗನ್ನು ನಿಪಿ-3 ಕರ್ನಾಟಕ ಅರಣ್ಯ ನಿಯಮ ಕಾಯ್ದೆ ಕಲಂ 67(3)ರಂತೆ ಕ್ರಮವಹಿಸಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉಃ

ಪ್ರಶ್ನೆ:11 ಪ್ರಾಸಾ-1ರವರು ಮುಂದುವರೆದು, 04 ಶ್ರೀಗಂಧದ ತುಂಡುಗಳು, 07 ಶ್ರೀಗಂಧದ ಮರದ ಚಕ್ಕೆಗಳು ಹಾಗೂ ಸ್ಕೂಲ್ ಬ್ಯಾಗನ್ನು ಎಂಒ-1 ಮತ್ತು 2ರಂತೆ ನೋಡಿ ಗುರುತಿಸಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉಃ

ಪ್ರಶ್ನೆ:12 ಪ್ರಾಸಾ-1ರವರು ಮುಂದುವರೆದು, ನಂತರ ಕಡತವನ್ನು ಚಾಸಾ-5ರವರಿಗೆ ಮುಂದಿನ ತನಿಖೆಗಾಗಿ ವಹಿಸಿಕೊಟ್ಟಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉಃ

ಪ್ರಶ್ನೆ:13 ಪ್ರಾಸಾ-2 ನಂಜುಂಡಪ್ಪ ತಮ್ಮ ಸಾಕ್ಷಿಯಲ್ಲಿ ದಿಃ13.10.2015ರಂದು ಚಾಸಾ-1ರವರು ದೂರವಾಣಿ ಮೂಲಕ ಅಕ್ರಮವಾಗಿ ಶ್ರೀಗಂಧದ ಮರದ ತುಂಡುಗಳನ್ನು ಸಾಗಣಿಕೆ ಮಾಡುತ್ತಿದ್ದ ಆಸಾಮಿಗಳನ್ನು ಹಿಡಿದಿರುವುದಾಗಿ ಹಾಗೂ ಪಂಚನಾಮೆ ಜರುಗಿಸಲು ಮರಳವಾಡಿ ಬಸ್ ನಿಲ್ದಾಣಕ್ಕೆ ಬರಲು ತಿಳಿಸಿದ ಮೇರೆಗೆ ತಾನು ಅದೇ ದಿನ ಬೆಳಗ್ಗೆ 11-00 ಗಂಟೆಗೆ ಮರಳವಾಡಿ ಬಸ್ ನಿಲ್ದಾಣಕ್ಕೆ ಹೋಗಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉಃ

ಪ್ರಶ್ನೆ:14 ಪ್ರಾಸಾ-2ರವರು ಮುಂದುವರೆದು, ಚಾಸಾ-1ರವರು ಚಾಸಾ-3ರವರಿಗೆ ಫೋನ್ ಮಾಡಿ ಪಂಚನಾಮೆಗೆ ಪಂಚರಾಗಿ ಬರಲು ತಿಳಿಸಿದ ಮೇರೆಗೆ, ಚಾಸಾ-3ರವರು ಮರಳವಾಡಿ ಬಸ್ ನಿಲ್ದಾಣಕ್ಕೆ ಬಂದಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉಃ

ಪ್ರಶ್ನೆ:15 ಪ್ರಾಸಾ-2ರವರು ಮುಂದುವರೆದು, ಚಾಸಾ-1ರವರು ಇಬ್ಬರು ಆಸಾಮಿಗಳನ್ನು ತನ್ನ ಹಾಗೂ ಚಾಸಾ-3ರವರ ಸಮಕ್ಷಮ ವಿಚಾರಣೆಗೊಳಪಡಿಸಿದಾಗ, ಸದರಿ ಇಬ್ಬರು ಆಸಾಮಿಗಳು ಗೊಲ್ಲರದೊಡ್ಡಿ ಗ್ರಾಮದ ಅರಣ್ಯ ಪ್ರದೇಶದಿಂದ ಶ್ರೀಗಂಧದ ಮರವನ್ನು ಕಡಿದು ತುಂಡುಗಳನ್ನಾಗಿ ಪರಿವರ್ತಿಸಿಕೊಂಡು ಮಾರಾಟ ಮಾಡಲು ರಾಮನಗರಕ್ಕೆ ತೆಗೆದುಕೊಂಡು ಹೋಗುತ್ತಿರುವ ವಿಚಾರವನ್ನು ತಿಳಿಸಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉಃ

ಪ್ರಶ್ನೆ:16 ಪ್ರಾಸಾ-2ರವರು ಮುಂದುವರೆದು, ಚಾಸಾ-1ರವರು ಇಬ್ಬರು ಆಸಾಮಿಗಳನ್ನು ಸುಪರ್ದಿಗೆ ಪಡೆದುಕೊಂಡು ಅವರ ಬಳಿ ಇದ್ದ ಶ್ರೀಗಂಧದ ಮರದ ತುಂಡುಗಳನ್ನು ವಶಕ್ಕೆ ಪಡೆದುಕೊಂಡು ತೂಕ ಮಾಡಿದ ನಂತರ, ತನ್ನ ಹಾಗೂ ಚಾಸಾ-3ರವರ ಸಮಕ್ಷಮ ಮಧ್ಯಾಹ್ನ 1-30 ರಿಂದ 3-00 ಗಂಟೆಯವರೆಗೆ ನಿಪಿ-1ರಂತೆ ಮಹಜರನ್ನು ಜರುಗಿಸಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉಃ

ಪ್ರಶ್ನೆಃ17 ಪ್ರಾಸಾ-2ರವರು ಮುಂದುವರೆದು, ಚಾಸಾ-1ರವರು ಇಬ್ಬರು ಆಸಾಮಿಗಳನ್ನು ಹಾಗೂ ಅಮಾನತುಪಡಿಸಿಕೊಂಡ ಶ್ರೀಗಂಧದ ಮರದ ತುಂಡುಗಳನ್ನು ಕನಕಪುರ ವಲಯ ಅರಣ್ಯಾಧಿಕಾರಿಗಳ ಕಛೇರಿಯಲ್ಲಿ ಹಾಜರುಪಡಿಸಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉಃ

ಪ್ರಶ್ನೆಃ18 ಪ್ರಾಸಾ-2ರವರು ಮುಂದುವರೆದು, ಚಾಸಾ-1ರವರು ಇಬ್ಬರು ಆಸಾಮಿಗಳನ್ನು ವಿಚಾರಣೆಗೊಳಪಡಿಸಿದ ಸಮಯದಲ್ಲಿ ಇಬ್ಬರು ಆಸಾಮಿಗಳು ಅವರ ಹೆಸರು ಚಿಕ್ಕತಿಮ್ಮ ಮತ್ತು ರಾಮಕೃಷ್ಣ ಅಂತ ತಿಳಿಸಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉಃ

ಪ್ರಶ್ನೆಃ19 ಪ್ರಾಸಾ-2ರವರು ಮುಂದುವರೆದು, ನಿಪಿ-1 ಮಹಜರಿಗೆ ಚಾಸಾ-3ರವರು ಸಹಿ ಮಾಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉಃ

ಪ್ರಶ್ನೆಃ20 ಪ್ರಾಸಾ-2ರವರು ಮುಂದುವರೆದು, ನಾಲ್ಕು ಶ್ರೀಗಂಧದ ತುಂಡುಗಳು, ಏಳು ಚಕ್ಕೆಗಳು ಹಾಗೂ ಬ್ಯಾಗನ್ನು ಎಂಒ-1 ಮತ್ತು 2ರಂತೆ ನೋಡಿ ಗುರುತಿಸಿರುವುದಾಗಿ ಹಾಗೂ ಮೇಲಾಧಿಕಾರಿಗಳ ಸಮಕ್ಷಮ ಹೇಳಿಕೆ ನೀಡಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉಃ

ಪ್ರಶ್ನೆಃ21 ಪ್ರಾಸಾ-3 ದಿನೇಶ್ ತಮ್ಮ ಸಾಕ್ಷಿಯಲ್ಲಿ ದಿಃ13.10.2018ರಂದು ಚಾಸಾ-1ರವರಿಂದ ಕಡತವನ್ನು ಪಡೆದುಕೊಂಡು ಪರಿಶೀಲಿಸಿ, ನಿಪಿ-4 ಮತ್ತು 5ರಂತೆ ಆರೋಪಿ-1 ಮತ್ತು 2ರವರ ಸ್ವಇಚ್ಛಾ ಹೇಳಿಕೆಗಳನ್ನು ದಾಖಲು ಮಾಡಿಕೊಂಡಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉಃ

ಪ್ರಶ್ನೆಃ22 ಪ್ರಾಸಾ-3ರವರು ಮುಂದುವರೆದು, ನಿಪಿ-4 ಮತ್ತು 5 ಸ್ವಇಚ್ಛಾ ಹೇಳಿಕೆಗಳಲ್ಲಿರುವ ಆರೋಪಿ-1 ಮತ್ತು 2ರವರ ಎಡಗೈ ಹೆಬ್ಬೆಟ್ಟಿನ ಗುರುತು ಹಾಗೂ ಸಹಿಯನ್ನು ನಿಪಿ-4(ಬಿ) ಮತ್ತು ನಿಪಿ-5(ಬಿ)ರಂತೆ ನೋಡಿ ಗುರುತಿಸಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉಃ

ಪ್ರಶ್ನೆಃ23 ಪ್ರಾಸಾ-3ರವರು ಮುಂದುವರೆದು, ಆರೋಪಿ-1 ಮತ್ತು 2ರವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ, ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ-7ರವರಿಗೆ ವಹಿಸಿಕೊಟ್ಟಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉಃ

ಪ್ರಶ್ನೆ:24 ಪ್ರಾಸಾ-**4** ದಾಳೇಸ್**.**ಎ**.**ಎಲ್**.** ತಮ್ಮ ಸಾಕ್ಷಿಯಲ್ಲಿ ದಿಃ29.07.2020ರಂದು ಚಾಸಾ-5 ರವರಿಂದ ಕಡತವನ್ನು ಪಡೆದುಕೊಂಡು ಪರಿಶೀಲಿಸಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉಃ

ಪ್ರಶ್ನೆ:25 ಪ್ರಾಸಾ-4ರವರು ಮುಂದುವರೆದು, ದಿಃ01.09.2022ರಂದು ಚಾಸಾ-6ರವರು ಆರೋಪಿತರ ವಿರುದ್ಧ ದೋಷಾರೋಪಣ ಪಟ್ಟಿ ಸಲ್ಲಿಸಲು ನಿಪಿ-6ರಂತೆ ಅನುಮತಿ ನೀಡಿದ ಮೇರೆಗೆ ಆರೋಪಿತರ ವಿರುದ್ಧ ದೋಷಾರೋಪಣ ಪಟ್ಟಿ ಸಲ್ಲಿಸಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉಃ

ಪ್ರಶ್ನೆ:26 ಈ ಕೇಸಿನಲ್ಲಿ ನಿಮಗೆ ಏನಾದರೂ ಹೇಳುವುದಿದೆಯೇ?

ಉಃ

ಪ್ರಶ್ನೆ:27 ನಿಮ್ಮ ಪರ ಸಾಕ್ಷಿದಾರರನ್ನು ವಿಚಾರಣೆ ಮಾಡುವಿರಾ?

ಉಃ

(ತೆರೆದ ನ್ಯಾಯಾಲಯದಲ್ಲಿ ಈ ಮೇಲ್ಕಂಡ ಆರೋಪಿ ಹೇಳಿಕೆಯನ್ನು ಆರೋಪಿಗೆ ತಿಳಿದಿರುವ ಭಾಷೆಯಲ್ಲಿ ಓದಿ ಹೇಳಿದ ನಂತರ ಆತನು ನೀಡಿದ ಉತ್ತರವನ್ನು ಯಥವತ್ತಾಗಿ ದಾಖಲಿಸಿಕೊಂಡು ಅದು ನಿಜವಾದ ಮತ್ತು ಸರಿಯಾದ ಹೇಳಿಕೆ ಆಗಿದೆಯೆಂದು ದೃಢೀಕರಿಸಿದೆ)

(ಕುಮಾರ್.ಹೆಚ್.ಎನ್)
2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ದಕ್ಷಿಣ ಜಿಲ್ಲೆ, ಕನಕಪುರದಲ್ಲಿ.

ದಿಃ29.01.2026.